ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
**KARNATAKA LEGISLATIVE ASSEMBLY RESEARCH AND REFERENCE BRANCH**

ಪತ್ರಿಕಾ ತುಣುಕುಗಳು
**PAPER CLIPPINGS**

14

ಇಲಾಖೆ / ವಿಷಯ : DEPARTMENT / SUBJECT: ಕೋವಿಡ್-19

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ಕರ್ನಾಟಕ ದಿನಾಂಕ : DATE : 24/7/2020

## ವೈದ್ಯಸಲಕರಣೆ ಖರೀದಿಯಲ್ಲಿ 2,000 ಕೋಟಿ ಲೂಟಿ ಎಂದ ಕಾಂಗ್ರೆಸ್
## ಪಂಚ ಸಚಿವರ ಮೂಲಕ ಸರಕಾರದ ತಿರುಗೇಟು, ಆರೋಪ ನಿರಾಕರಣೆ

# ರಾಜಕೀಯ ಸೋಂಕು

24/7/2020

**ವಿಕ ಸುದ್ದಿಲೋಕ** ಬೆಂಗಳೂರು

ರಾಜ್ಯದಲ್ಲಿ ಕೊರೊನಾ ಸೋಂಕು ಮತ್ತು ಸಾವು ಹೆಚ್ಚುತ್ತಿರುವ ನಡುವೆಯೇ ರಾಜಕೀಯ ಸಮರವೂ ಸ್ಫೋಟಗೊಂಡಿದೆ.

ವೈದ್ಯಕೀಯ ಸಲಕರಣೆಗಳ ಖರೀದಿಯಲ್ಲಿ ಭಾರಿ ಅಕ್ರಮವಾಗಿದೆ ಎಂದು ಈ ಹಿಂದೆ ಎರಡು ಬಾರಿ ಆರೋಪ ಮಾಡಿದ್ದ ಕಾಂಗ್ರೆಸ್ ಗುರುವಾರ 2000 ಕೋಟಿ ರೂ. ಲೂಟಿಯ ಗಂಭೀರ ಆರೋಪವನ್ನು ಮಾಡುವ ಮೂಲಕ ನಿರ್ಣಾಯಕ ಸಮರಕ್ಕೆ ಇಳಿಯಿತು. ಇದಕ್ಕೆ ಆರು ಸಚಿವರ ಮೂಲಕ ತಿರುಗೇಟು ನೀಡಿದ ಸರಕಾರ, ಆರೋಪವನ್ನು ಸಾರಾಸಗಟಾಗಿ ತಳ್ಳಿ ಹಾಕಿತು.

ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಜತೆ ಪಕ್ಷದ ಕಚೇರಿಯಲ್ಲಿ ಗುರುವಾರ ಜಂಟಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ ದಾಖಲೆ ಸಹಿತ ಆರೋಪ ಮಾಡಿದರು. ನಾನಾ ಇಲಾಖೆಗಳು 4,167 ಕೋಟಿ ರೂ. ವೆಚ್ಚದಲ್ಲಿ ವೈದ್ಯಕೀಯ ಸಲಕರಣೆ ಖರೀದಿಸಿದ್ದು, ಇದರಲ್ಲಿ 2000 ಕೋಟಿ ರೂ. ಅವ್ಯವಹಾರ ನಡೆಸಲಾಗಿದೆ ಎನ್ನುವುದು ಆರೋಪದ ಮುಖ್ಯಾಂಶ. ವ್ಯವಹಾರದ ಬಗ್ಗೆ ಹೈಕೋರ್ಟ್ ಹಾಲಿ ನ್ಯಾಯಮೂರ್ತಿಗಳಿಂದ ತನಿಖೆ ನಡೆಸಬೇಕೆಂದು ಸಿದ್ದರಾಮಯ್ಯ ಆಗ್ರಹಿಸಿದ್ದಾರೆ.

ಸಿದ್ದರಾಮಯ್ಯ ಅವರು ಆರೋಪಗಳ ಸುರಿಮಳೆ ಸುರಿಸುತ್ತಿದ್ದಂತೆಯೇ ಅತ್ತ ಸರಕಾರವೂ ಚುರುಕಾಯಿತು. ಸಂಜೆ ಮೂರು ಗಂಟೆಗೆ ಸರಕಾರದ ಪರವಾಗಿ ಐದು ಸಚಿವರು ಸುದ್ದಿಗೋಷ್ಠಿ ನಡೆಸಿದರು. ಡಿಸಿಎಂ ಅಶ್ವತ್ಥ ನಾರಾಯಣ, ಸಚಿವರಾದ ಆರ್. ಅಶೋಕ್, ಬಸವರಾಜ ಬೊಮ್ಮಾಯಿ, ಶಿವರಾಮ್ ಹೆಬ್ಬಾರ್, ಡಾ. ಕೆ. ಸುಧಾಕರ್ ಕೂಡಾ ದಾಖಲೆಗಳನ್ನೇ ಮುಂದಿಟ್ಟು ವಾದ ಮಾಡಿದರು ಮತ್ತು ಆರೋಪಗಳನ್ನು ಅಲ್ಲಗಳೆದರು.

**ಬಿಎಸ್‌ವೈ ಸಿದ್ಧರಾಗಿದ್ದರು:** ಸಿದ್ದರಾಮಯ್ಯ ಅವರ ಸುದ್ದಿಗೋಷ್ಠಿ ವಿಚಾರ ಸಂಪುಟ ಸಭೆಯಲ್ಲಿ ಪ್ರಸ್ತಾಪವಾಗಿ ಸ್ವತಃ ಸಿಎಂ ಅವರಿಗೆ ಕಿರಿಕಿರಿ ಉಂಟು ಮಾಡಿತು. ಆರೋಪಗಳಿಗೆ ತಾವೇ ಸುದ್ದಿಗೋಷ್ಠಿಯಲ್ಲಿ ಉತ್ತರ ಕೊಡುವುದಕ್ಕೆ ಮುಂದಾದರು. ಆದರೆ, ಕೆಲವು ಹಿರಿಯ ಸಚಿವರ ಸಲಹೆ ಮೇರೆಗೆ ಸಿಎಂ ಆ ನಿರ್ಧಾರ ಕೈಬಿಟ್ಟರೆಂದು ಹೇಳಲಾಗಿದೆ.

ಸಮಗ್ರ ವರದಿ 02



**ಖರೀದಿ ಮೊತ್ತ**

| 4,167 ಕೋಟಿ ರೂ. ಕಾಂಗ್ರೆಸ್ ಪ್ರಕಾರ | 2,118 ಕೋಟಿ ರೂ. ಸರಕಾರದ ಪ್ರಕಾರ |
| --- | --- |

**ಮೌನಿಯಾದ ಶ್ರೀರಾಮುಲು**

ಪತ್ರಿಕಾಗೋಷ್ಠಿಯಲ್ಲಿ ಆರೋಗ್ಯ ಸಚಿವ ಶ್ರೀರಾಮುಲು ಇದ್ದರೂ ಮಾತನಾಡಲಿಲ್ಲ. ತಮ್ಮನ್ನು ಕಡೆಗಣಿಸಲಾಗುತ್ತಿದೆ ಎಂಬ ಬೇಸರ ಅವರಿಗಿದೆ ಎನ್ನಲಾಗಿದೆ.

## ಕಾಂಗ್ರೆಸ್ vs ಸರಕಾರ: ಪಂಚ ಮಹಾ ಸವಾಲು

| ಕಾಂಗ್ರೆಸ್ ಆರೋಪ | ಸರಕಾರ ಪ್ರತ್ಯುತ್ತರ |
| --- | --- |
| 1 ವೈದ್ಯಕೀಯ ಸಲಕರಣೆ ಖರೀದಿಯಲ್ಲಿ 2000 ಕೋಟಿ ರೂ. ಅವ್ಯವಹಾರ ನಡೆದಿದೆ. | 1 ಕೋವಿಡ್ ನಿರ್ವಹಣೆಗಾಗಿ ಇದುವರೆಗೆ ಖರ್ಚಾಗಿದ್ದೇ 2118 ಕೋಟಿ ರೂ., 2000 ಕೋಟಿ ರೂ. ಅವ್ಯವಹಾರ ಹೇಗೆ? |
| 2 ತಮಿಳುನಾಡು 4.78 ಲಕ್ಷಕ್ಕೆ ಖರೀದಿಸಿದ ವೆಂಟಿಲೇಟರ್ ಅನ್ನು ರಾಜ್ಯದಲ್ಲಿ 5.6 ಲಕ್ಷದಿಂದ 18.20 ಲಕ್ಷ ರೂ. ಕೊಟ್ಟು ಖರೀದಿ | 2 4 ಲಕ್ಷದ ವೆಂಟಿಲೇಟರ್‌ಗೂ ನಾವು ಖರೀದಿಸಿದ್ದಕ್ಕೂ ವ್ಯತ್ಯಾಸವಿದೆ. ನಮ್ಮದು ಸುಧಾರಿತ, ಗುಣಮಟ್ಟದ್ದು |
| 3 ಚೀನಾ ಮೂಲದ ಕಂಪನಿಯಿಂದ 330 ರೂ.ನ ಪಿಪಿಇ ಕಿಟ್‌ಗೆ 2,117 ರೂ. ಕೊಟ್ಟು ಖರೀದಿ | 3 ಚೀನಾದಿಂದ 2100 ರೂ.ಗೆ ಖರೀದಿ ಮಾಡುವುದಕ್ಕೂ ಕಾರಣವಿದೆ. ಇಡಿ ಪ್ರಪಂಚದಲ್ಲೇ ಆಗ ಪಿಪಿಇ ಕಿಟ್ ಕೊರತೆ ಇತ್ತು. |
| 4 50-60 ರೂ.ಗೆ ಸಿಗುವ ಮಾಸ್ಕ್‌ಗೆ 126ರಿಂದ 150 ರೂ. ಕೊಟ್ಟು ಹತ್ತು ಲಕ್ಷ ಮಾಸ್ಕ್ ಖರೀದಿ | 4 11 ಲಕ್ಷ ಮಾಸ್ಕ್‌ಗಳನ್ನು 97 ರೂ.ನಿಂದ 147 ರೂ. ವರೆಗಿನ ದರದಲ್ಲಿ ಖರೀದಿಸಲಾಗಿದೆ. ಇದೇ ಮಾಸ್ಕ್‌ಗೆ ಮಾರುಕಟ್ಟೆಯಲ್ಲಿ 200 ರೂ. ಇದೆ. |
| 5 80 ರೂ.ಗೆ ಸಿಗುವ 500 ಎಂಎಲ್ ಸ್ಯಾನಿಟೈಸರ್‌ಗೆ ಒಂದು ಇಲಾಖೆ 250 ರೂ., ಇನ್ನೊಂದು 600 ರೂ. ನೀಡಿ ಖರೀದಿಸಿದೆ. | 5 500 ಎಂಎಲ್ ಸ್ಯಾನಿಟೈಸರ್‌ಗೆ 250 ರೂ. ನೀಡಲಾಗಿದೆ. ಕಾಂಗ್ರೆಸ್ ಹೇಳಿದ ಕಂಪನಿಯಿಂದ ಖರೀದಿಸಿಯೇ ಇಲ್ಲ. |

ಕಾರ್ಮಿಕರಿಗೆ 1200 ರೂ. ಊಟ ಕೊಟ್ಟಿರುವುದಾಗಿ ಸರಕಾರ ಹೇಳುತ್ತಿದೆ. ಯಾವ ಪಂಚತಾರಾ ಹೋಟೆಲ್‌ನಿಂದ ತಂದ್ರಿ? ಎಷ್ಟು ಜನಕ್ಕೆ ಆಹಾರ ಕಿಟ್ ಕೊಟ್ಟಿದ್ದೀರಿ?

-ಡಿ.ಕೆ. ಶಿವಕುಮಾರ್ ಕೆಪಿಸಿಸಿ ಅಧ್ಯಕ್ಷ

ಸಿದ್ದರಾಮಯ್ಯ ಚಿಲ್ಲರೆ ರಾಜಕಾರಣ ಮಾಡುತ್ತಿದ್ದಾರೆ. ಕಾಮಾಲೆ ಕಣ್ಣಿನವರಿಗೆ ಕಾಣುವುದೆಲ್ಲಾ ಹಳದಿ ಎಂಬಂತೆ ಭ್ರಷ್ಟರಿಗೆ ಎಲ್ಲವೂ ಹಾಗೆಯೇ ಕಾಣಿಸುತ್ತದೆ.

-ನಳಿನ್ ಕುಮಾರ್ ಕಟೀಲ್ ಬಿಜೆಪಿ ಅಧ್ಯಕ್ಷ